## ರಾಜ್ಯದಲ್ಲಿರುವ ಲಂಬಾಣಿ ತಾಂಡಗಳು

35 (75) ಶ್ರೀ ವಿಶ್ವನಾಥ ಹಾಟೇಲ್ ಹೆಬ್ಬಾಳ್ (ಚಿತ್ತಾಪುರ).—ಕಂದಾಯ ಮಂತ್ರಿಗಳು ಈ ವಿಷಯುಗಳನ್ನು ದಯವಿಟ್ಟು ತಿಳಿಸುವರೆ.—

ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ಲಂಬಾಣಿ ತಾಂಡಾಗಳಿವೆ;

ಆ) ಈ ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿಗಣಿಸಲಾಗುವುದೆ;

ಇ) ಮೂಲ ಗ್ರಾಮದಿಂದ ಎರಡು ಕಿ.ಮೀ. ದೂರದಲ್ಲಿರವ ಕನಿಷ್ಟ 500 ಕ್ಕಿಂತ ಹೆಚ್ಚಿನ ಜನಸಂಖ್ಯೆಯ ಲಂಬಾಣಿ ತಾಂಡಗಳನ್ನಾದರೂ, ಕಂದಾಯ ಗ್ರಾಮಗಳನ್ನಾಗಿ ಪರಿಗಣಿಸಲು ಸರ್ಕಾರದವರು ತೀರ್ಮಾನಿಸುವರೆ;

ಈ) ಇಲ್ಲಿಯವರೆಗೂ ನಿರ್ಲಕ್ಷಿಸಲ್ಪಟ್ಟಿರುವ ತಾಂಡಾಗಳ ಸರ್ವತೋಮುಖ ಅಭಿವೃದ್ಧಿಗಾಗಿ ಸರ್ಕಾರವು ಪ್ರತ್ಯೇಕ ಯೋಜನೆ ಹಾಕಿಕೊಳ್ಳುವರೇ ?

ಶ್ರೀ ವಿ. ಎಲ್. ಹಾಟೇಲ್ (ಕಂದಾಯ ಮಂತ್ರಿಗಳು).—ಅ) 1690

ಆ) ಇಲ್ಲ

ಇ) ಇಲ್ಲ

ಈ) ಪಿವಿಸಿ ಗ್ರಾಮಾಂತರ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಅಭಿವೃದ್ಧಿಯನ್ನು ಸಾಧಿಸಲಾಗುತ್ತಿದೆ.

ಶ್ರೀ ಪಿ. ರಾಮದೇವ್.—ಮಾನ್ಯ ಅಧ್ಯಕ್ಷರೇ ನನ್ನದೊಂದು ಕ್ರೀಯಾಲೋಪ ಸೆಕ್ಷನ್ 38-39-2' 0 ಮತ್ತು 201 ರ ಬೇರೆಗೆ ತಮ್ಮ ಗಮನಕ್ಕೆ ತರುವುದೇನೆಂದರೆ ಇದೇ ತಿಂಗಳ 23 ನೇ ತಾರೀಖು ದೇವರ ಜೀವನ ಹಳ್ಳಿಯಲ್ಲಿ ಶಾಸಕ ಶ್ರೀ ವಿ. ಶ್ರೀನಿವಾಸ್‌ರವರನ್ನು ಪೋಲೀಸ್ ಅಧಿಕಾರಿಗಳು ಬಂಧಿಸಿರುತ್ತಾರೆಂದು ವರದಿ ಬಂದಿದೆ. ಸಾಧಾರಣವಾಗಿ ಶಾಸಕರನ್ನು ಬಂಧಿಸಿದಾಗ ಅಧ್ಯಕ್ಷರಿಗೆ ತಿಳಿಸತಕ್ಕಂಥದ್ದು ಪೋಲೀಸ್‌ನವರ ಕರ್ತವ್ಯ ಆ ರೀತಿ ಪೋಲೀಸ್ ಅಧಿಕಾರಿಗಳು ತಿಳಿಸಿದ್ದಾರೆಯೇ ? ಹಾಗೇನಾದರೂ ಅವರನ್ನು ಅರೆಸ್ಟ್ ಮಾಡಲು ಇದ್ದಂಥ ಆರೋಪವೇನು? ಈಗ ಅವರನ್ನು ರಿಲೀಸ್ ಮಾಡಿದ್ದಾರೆಯೆ ? ಶಾಸಕರು ಯಾರನ್ನೇ ಆಗಲಿ ಬಂಧನ ಮಾಡಿದರೆ, ಮಾಡಿದ ತಕ್ಷಣ ತಮಗೆ ಇಂಟಿಮೇಷನ್ ಕಳುಹಿಸಿಕೊಡಬೇಕು. ಇಂಟಿಮೇಷನ್ ಏನಾದರೂ ಬಂದಿರುತ್ತದೆಯೆ ತಿಳಿಸಬೇಕು.

ಉಪಸಭಾಪತಿಯವರು.—ಮಾನ್ಯ ಸದಸ್ಯರ ಬಗ್ಗೆ ಅರೆಸ್ಟ್ ಮಾಡಿದ್ದೀವೆ, ಅರೆಸ್ಟ್ ಮಾಡುತ್ತೀವೆ ಎನ್ನುವ ಬಗ್ಗೆ ಯಾವ ವಿವರಣೆಯೂ ಬಂದಿಲ್ಲ.

ಶ್ರೀ ಪಿ. ರಾಮದೇವ್.—ಅರೆಸ್ಟ್ ಮಾಡಿರುತ್ತಾರೆಂದು ಸರ್ವಮಾನ ಪತ್ರಿಕೆಗಳಲ್ಲಿ ಬಂದಿರುತ್ತದೆ. ತಮಗೆ ಇದರ ಬಗ್ಗೆ ಇಂಟಿಮೇಷನ್ ಮಾಡದಿದ್ದರೆ ಸೆಕ್ಷನ್ 4 ಪ್ರಕಾರವಾಗಿ ಶಾಸಕರ ಹಕ್ಕು ಭಾದ್ಯತೆಗೆ ಸಂಬಂಧಪಟ್ಟ ವಿಚಾರವಾದ್ದರಿಂದ ಅವರನ್ನು ಅರೆಸ್ಟ್ ಮಾಡಿದ್ದಕ್ಕೆ ಇನ್‌ಫರ್‌ಮೇಷನ್ ಅವರು ಕಳುಹಿಸಿಕೊಡಲೇಬೇಕು.

**Mr. DEPUTY SPEAKER.- If the police has not intimated the Speaker regarding his arrest in time' it amounts to privilege. if that is so, we will take action according to rules. I will not allow the police to take law into their own hands.**

ಶ್ರೀ ಪಿ. ರಾಮದೇವ್:—ಈಗ ಸದಸ್ಯರು ಎಲ್ಲಿರುತ್ತಾರೆ. ಅವರನ್ನು ಬಿಡುಗಡೆ ಮಾಡಿರುತ್ತಾರೆಯೇ ಅಥವಾ ಲಾಕಪ್‌ನಲ್ಲಿಯೇ ಇಟ್ಟುಕೊಂಡಿರುತ್ತಾರೆಯೇ ತಿಳಿಸಬೇಕು.

**Mr DEPUTY SPEAKER.-I cannot say now. There is no intimation to me whatsoever.**

ಶ್ರೀ ಪಿ. ರಾಮದೇವ್ —ದಯವಿಟ್ಟು ಇನ್‌ಫರ್‌ಮೇಷನ್ ತರಿಸಿ.

ಉಪಾಧ್ಯಕ್ಷರು.—ನಮಗೆ ಇಂಟಿಮೇಷನ್ ಬಂದಿಲ್ಲ. ವಿವರಗಳನ್ನು ಕೊಡಿ ಮುಂದಿನ ಕ್ರಮವನ್ನು ತೆಗೆದುಕೊಳ್ಳೋಣ.

(ಗೊಂದಲ)

ಉಪಸಭಾಧ್ಯಕ್ಷರು.—ದಯವಿಟ್ಟು ಒಬ್ಬೊಬ್ಬರೆ ಸದಸ್ಯರು ಮಾತನಾಡಬೇಕು. ಮಾನ್ಯ ಲಕ್ಷ್ಮೀಸಾಗರ್‌ರವರೇ ತಾವು ವಿವರಣೆಯನ್ನು ಕೊಡಬಹುದು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸಭಾಧ್ಯಕ್ಷರೇ ಮಾನ್ಯ ಸದಸ್ಯರಾದ ಶ್ರೀ ರಾಮದೇವ್‌ರವರು ಎತ್ತಿರತಕ್ಕಂಥ ವಿಚಾರ ಬಹಳ ಮುಖ್ಯವಾದುದಾಗಿರುತ್ತದೆ. ತಾವು ಈಗಾಗಲೇ ವಿವರಣೆಯನ್ನು ಕೊಟ್ಟ

ದ್ದೀರಿ. ಅನಂರಿಂದ ವಿವರಣೆ ಬಂದಿಲ್ಲ ತಮಗೆ ವರದಿ ಬಾರದೆ ಇರುವ ಕಾರಣ, ಅವರನ್ನು ಬಂದಿಸಿಲ್ಲ ಎನ್ನುವ ವಿಚಾರ ತಿಳುವಳಿಕೆಗೆ ಬರುತ್ತದೆ ಪತ್ರಿಕೆಗಳಲ್ಲಿ ಬಂದಿರತಕ್ಕಂಥ ಒಂದು ಹೇಳಿಕೆಯ ಮೇಲೆ ಅದು ಸರಿಯಾಗಿದೆ ಎಂಹು ಒಂದು ನಿರ್ಧಾರಕ್ಕೆ ಬರುವುದಕ್ಕೂ ಸಾಧ್ಯವಾಗುವುದಿಲ್ಲ. ಆದುದರಿಂದ ಈಗ ವಿಷಯ ಗಮನಕ್ಕೆ ತಂದಿರುತ್ತೀರಿ. ಆ ರೀತಿ ಏನಾದರೂ ಆಗಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ವರದಿ ಬರದೆ ನಾವು ಏನು ಮಾಡುವುದಕ್ಕಾಗುವುದಿಲ್ಲವೆಂದು ತಮ್ಮ ಗಮನಕ್ಕೆ ತರಬಯಸುತ್ತೇನೆ.

(ಗೊಂಡಲ)

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ ತಮ್ಮ ಕಡೆಗೆ ಬಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೆ.

ಉಪಾಧ್ಯಕ್ಷರು.—ಮಾನ್ಯ ಮಲ್ಲಪ್ಪನವರೇ ತಮಗೆ ಅನಂತರ ಅವಕಾಶ ಕೊಡುತ್ತೇನೆ. ತಮ್ಮ ಗಮನ ಸೆಳೆಯುವ ಸೂಚನೆ ಬಂದಿರುತ್ತದೆ. ಉತ್ತರ ಮಾನ್ಯ ಸಚಿವರು ಕೊಡುತ್ತಾರೆ.

(ಗೊಂಡಲ)

Mr. DEPUTY SPEAKER:—I may be allowed to Speak. I am on my legs. Please, all of you resume your Seats. I do understand the emotion of the hon. Members with regard to the Stipendiary graduates I have already told that I will allow all the hon. Members who desire to speak on the subject matter

HON. MEMBERS.--When.

MR. DEPUTY SPEAKER --Now alone after laying down the papers on the table of the House which will not take more than a minute.

## ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಪಿ. ಎಲ್. ಪಾಟೀಲ್. ಕಂದಾಯ ಮಂತ್ರಿಗಳು.--ಮಾನ್ಯ ಅಧ್ಯಕ್ಷರೇ ನನ್ನ ಹೆಸರಿನ ಮುಂದೆ ಇರುವಂತಹ 1957 ನೇ ಇಸವಿಯ ಕರ್ನಾಟಕ ಸ್ಟ್ಯಾಂಪು ಶಾಸನದ 9(2) ನೇ ಕಲಮಿನ ಮೇರೆಗೆ ಸರ್ಕಾರಿ ನೌಕರರಿಗೆ ಗೃಹ ನಿರ್ಮಾಣ ಮನೆ ಖರೀದಿ ಹಾಗೂ ಮನೆ ದುರಸ್ಥಿಯ ಮುಂಗಡಕ್ಕೆ ಸಂಬಂಧಿಸಿದ ಸ್ಟ್ಯಾಂಪು ಶುಲ್ಕದ ವಿನಾಯಿತಿಗೆ ಸಂಬಂಧಿಸಿದಂತೆ ಹೊರಡಿಸಿದ ದಿನಾಂಕ ಮೇ 6, 1982 ನೇ ಆರ್.ಡಿ.84 ಇ. ಎಸ್. ಟಿ. 81 ನೇ ಕ್ರಮಾಂಕದ ಆದೇಶ ಹಾಗೂ (2) ಮೈಸೂರಿನ ವಿಶ್ರಾಂತಿಧಾಮದವರಿಗೆ ಬರೆದುಕೊಡಬೇಕಾದ ಕ್ರಯಪತ್ರದ ಸ್ಟ್ಯಾಂಪು ಶುಲ್ಕದಲ್ಲಿನ ರಿಯಾಯಿತಿಗೆ ಸಂಬಂಧಿಸಿದಂತೆ ಹೊರಡಿಸಿದ ದಿನಾಂಕ ಫೆಬ್ರವರಿ 17, 1983 ನೇ ಆರ್. ಡಿ. 140 ಇ. ಎಸ್. ಆರ್. 82 ನೇ ಕ್ರಮಾಂಕದ ಆದೇಶಗಳನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ (ಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೇ

"1939 ನೇ ಇಸವಿಯ ಕರ್ನಾಟಕ ವಾಹನಗಳ ಶಾಸನದ 133 (3) ನೇ ಕಲಮಿನ ಮೇರೆಗೇ 1983 ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ (ಮೂರನೆಯ ತಿದ್ದುಪಡಿ) ನಿಯಮಗಳ ಮೇರೆಗೆ ಹೊರಡಿಸಿದ ದಿನಾಂಕ ಫೆಬ್ರವರಿ 11, 1982 ನೇ ಎಚ್. ಡಿ. 17 ಟಿ. ಎಂ. ಆರ್ 82 ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಉಪಾಧ್ಯಕ್ಷರು:--ಕಾಗದ ಪತ್ರಗಳನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ 9 ನೇ ಪಟ್ಟಿಯನ್ನು ಸಭೆಯ ಮುಂದೆ ಮಂಡನೆ ಮಾಡಲಾಗಿದೆ.

Now, we can take up the question of Stipendiary Graduates.

(Interruptions)

ಉಪಾಧ್ಯಕ್ಷರು.—ಈಗ ಸ್ಟೈಫಂಡರಿ ಗ್ರಾಜ್ಯುಯೇಟ್ಸ್ ವಿಚಾರ ತೆಗೆದುಕೊಳ್ಳಲಾಗುತ್ತದೆ.

(ಗೊಂಡಲ)

Mr. DEPUTY SPEAKER :-- If any Member speakes without my permission, it will not go into the record.

ಶ್ರೀ ಬಿ ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯಪಾಲರುಗಳಿಂದ ನಿಯೋಜಿತ ದಿನಸ ಈ ಸ್ಟೈಫಂಡರಿ ಪದವೀಧರರು ಬೆಂಗಳೂರಿಗೆ ಬಂದಿದ್ದಾರೆ.